ಬಿಲ್ಡಿಂಗ್ ಕೆಡವಿ ಅದಕ್ಕೆ ಸಂಖ್ಯೆ ಏನು ಕೊಟ್ಟಿದ್ದಾರೆ, ಆ ರೀತಿ 11 ನಂಬರನ್ನು ಮುಖ್ಯವಾಗಿ ಇಟ್ಟುಕೊಂಡು ಒಂದು ಮೆಸೇಜ್ ಕಳುಹಿಸಿದ್ದಾರೆ. ಈ ಮೆಸೇಜ್ ಅರ್ಥವೇನು? ಇದನ್ನು ಯಾರು ಕಳುಹಿಸಿದ್ದಾರೆ ಎನ್ನುವಂತಹ ದೂರವಾಣಿ ನಂಬರ್ ಕೂಡ ಇದೆ. ಆ ಎಲ್ಲಾ ಮಾಹಿತಿ ಒದಗಿಸಿದ್ದೇನೆ, ಅದನ್ನು ಮಾನ್ಯ ಅಧ್ಯಕ್ಷರ ಮೂಲಕ ಕೊಟ್ಟಿದ್ದೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ವಿರೋಧ ಪಕ್ಷದ ನಾಯಕರು) : ಮಾನ್ಯ ಉಪಾಧ್ಯಕ್ಷರೆ, ಟೆಲಿಫೋನ್ ನಂಬರ್ ಇದೆ, ಅದನ್ನು ಯಾರು ಮಾಡಿದ್ದಾರೆ, ಅದರ ಆಧಾರದ ಮೇಲೆ ಬೆನ್ನತ್ತಿದರೆ, ಅವನ ಮೇಲೆ ಕಾನೂನು ಕ್ರಮ ತೆಗೆದುಕೊಳ್ಳುವುದಕ್ಕೆ ಬರುತ್ತದೆ. ಇದು ರಿಪೀಟ್ ಆಗುವುದು ತಪ್ಪುತ್ತದೆ. ಭಟ್ಕಳ ಬಹಳ ಸೂಕ್ಷ್ಮವಾದ ಪ್ರದೇಶ, ಈಗಾಗಲೇ ತಿಮ್ಮಪ್ಪ ನಾಯಕ್‌ರವರ ಕೊಲೆಯಾಯಿತು ಚಿತ್ತರಂಜನ್ ಕೊಲೆಯಾಯಿತು. ಇಂತಹ ಸಂದರ್ಭದಲ್ಲಿ ಇನ್ನೊಮ್ಮೆ ಅನಾಹುತವಾಗದಂತೆ ತಡೆಯಬೇಕು ಎನ್ನುವಂತಾದ್ದು ನಮ್ಮ ಉದ್ದೇಶ. ಆದುದರಿಂದ ಅದರ ಕಾಪಿ ಕಳುಹಿಸಿಕೊಡುತ್ತಾರೆ. ಟೆಲಿಫೋನ್ ನಂಬರ್ ಇದೆ, ತತ್‌ಕ್ಷಣ ಕ್ರಮ ತೆಗೆದುಕೊಳ್ಳುವುದು ಒಳ್ಳೆಯದು.

ಶ್ರೀ ಧರ್ಮಸಿಂಗ್: ಮಾನ್ಯ ವಿರೋಧ ಪಕ್ಷದ ನಾಯಕರು, ದೂರವಾಣಿ ಸಂಖ್ಯೆಗಳು ಇದೆ, ಬೇರೆ ಬೇರೆ ಮಾಹಿತಿಗಳು ಇದೆಯೆಂದು ಹೇಳಿದ್ದಾರೆ. ನಾವು ಅದನ್ನು ತರಿಸಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳತಕ್ಕಂಥ ಆದೇಶ ಮಾಡುತ್ತೇನೆ.

(e) Reg:- Increasing the Compensation amount to the family of flood victims.

SRI MANOHAR KALLAPPA KINEKAR (Uchagaon): Sir, during the last 15 days in Belgaum and Khanapur Talukas because of heavy rains all rivers and naalas are flooded. In Markandeya river 3 persons were flown away. In Kudremani village one girl expired because of collapsing of a house. For this Government has given a compensation of Rs.50,000. But this Rs.50,000 is very less. For one life we cannot value like

this because farmers are dependent only on their own family. If a Government servant dies he will get insurance and other facilities. But farmers cannot get other things apart from Government help. So, I would request the Hon'ble Chief Minister to increase this compensation from Rs.50,000 to Rs.5 lakhs when any farmer dies in natural calamity. Secondly. Because of heavy rain, in Belgaum taluk most of the potato crop has spoiled. In Belgaum Taluk, nearly' eight to ten acres, potato plantations are there. For this farmers have to spend too much. Before germination stage this potato seed has spoiled. Farmers have incurred heavy loss. That is why you should give compensation to the farmers immediately. Like – wise, other problems are also there. The Government is now thinking to save the farmers.

ಶ್ರೀ ಹೆಚ್. ಆಂಜನೇಯ : ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಕನ್ನಡದಲ್ಲಿ ಮಾತನಾಡಲು ಹೇಳಿ.

ಉಪಾಧ್ಯಕ್ಷರು: ಅವರು ಇಂಗ್ಲೀಷ್‌ನಲ್ಲಿ ಮಾತನಾಡುತ್ತಾರೆ. ಅವರ ಭಾಷೆ ಮಾನ್ಯ ಮುಖ್ಯಮಂತ್ರಿಯವರಿಗೆ ಅರ್ಥವಾಗುತ್ತದೆ, ತಾವು ಕುಳಿತುಕೊಳ್ಳಿ. ತಾವು ಮಾತನಾಡಿ.

Sri Manohar Kallppa Kinekar: Sir, you see, I am talking in English. Actually, my mother tongue is Marati. I should talk in Marati. You should not prevent it. That is my Constitutional right. Every time, I used to fight for this. If you do like this every time, it is not possible for me to talk about my constituency problems.

ಶ್ರೀ ಹೆಚ್.ಕೆ. ಪಾಟೀಲ್ : ತಾವು ಬಹಳ ಚೆನ್ನಾಗಿ ಕನ್ನಡ ಭಾಷೆಯನ್ನು ಮಾತನಾಡುತ್ತೀರಿ. ತಾವು ಕನ್ನಡದಲ್ಲಿ ಮಾತನಾಡಲು ಏಕೆ ಪ್ರಯತ್ನವನ್ನು ಮಾಡಬಾರದು?

(ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರು ಮರಾಠಿ ಭಾಷೆಯಲ್ಲಿ ಮಾತನಾಡಿದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೆ, ತಾವು ಮರಾಠಿ ಭಾಷೆಯಲ್ಲಿ ಮಾತನಾಡುವುದಕ್ಕೆ ಅವಕಾಶವನ್ನು ಕೊಡಬಾರದು. ಇದು ಕರ್ನಾಟಕ ರಾಜ್ಯದ ಶಾಸನ ಸಭೆ ಇವರೆಲ್ಲಾ ಕರ್ನಾಟಕದಲ್ಲಿರುವಂತಹ ಜನ, ಇವರು ಕನ್ನಡದಲ್ಲೇ ಮಾತನಾಡಬೇಕು.

(ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರು ಮರಾಠಿ ಭಾಷೆಯಲ್ಲಿ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು: ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರೇ, ತಾವು ಯಾವ ಭಾಷೆಯಲ್ಲಿ ಮಾತನಾಡುತ್ತಿದ್ದೀರಿ?

(ಗೊಂದಲ)

(ಮಾನ್ಯ ಸದಸ್ಯರು ಮರಾಠಿ ಭಾಷೆಯಲ್ಲಿ ಮಾತನಾಡುತ್ತಿದ್ದರು)

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪಾಧ್ಯಕ್ಷರೇ, ನಿಮಗೆ ಏನಾದರೂ ಅರ್ಥವಾಗಿದೆಯಾ, ಹೇಳಿ.

ಉಪಾಧ್ಯಕ್ಷರು : ಇಲ್ಲ, ಅರ್ಥವಾಗಿಲ್ಲ.

ಶ್ರೀ ವಾಟಾಳ್ ನಾಗರಾಜ್ : ಇಲ್ಲಿ ಮರಾಠಿ ಭಾಷೆಯಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲ. ಇದು ಕರ್ನಾಟಕ ರಾಜ್ಯದ ಶಾಸನಸಭೆ, ಇಲ್ಲಿ ಕನ್ನಡದಲ್ಲಿ ಮಾತನಾಡಬೇಕು. ನಮ್ಮವರ, ಬೆಳಗಾಂನವರು ಇದ್ದಾರೆ, ಈ ಬೆಳಗಾಂ ಎಂದೆಂದಿಗೂ ಮಹಾರಾಷ್ಟ್ರಕ್ಕೆ ಹೋಗುವುದಕ್ಕೆ ಸಾಧ್ಯವಿಲ್ಲ.

(ಮಾನ್ಯ ಸದಸ್ಯರು ಮರಾಠಿ ಭಾಷೆಯಲ್ಲಿ ಮಾತನಾಡುತ್ತಿದ್ದರು)

ಡಾ: ಕೆ. ಅನ್ನದಾನಿ : ನಮಗೆ ಅರ್ಥವಾಗುವುದಿಲ್ಲ ಕನ್ನಡದಲ್ಲಿ ಮಾತನಾಡಿ, ಹೋಗಿ ಮಹಾರಾಷ್ಟ್ರದಲ್ಲಿ ಮಾಡಿ, ಕರ್ನಾಟಕದಲ್ಲಿ ನೀರು ಬೇಕು, ಗಾಳಿ ಬೇಕು, ಬೆಳಕು ಬೇಕು. ಕನ್ನಡ ಭಾಷೆ ಬೇಡವೆನ್ನುವುದಕ್ಕೆ ನಾಚಿಕೆಯಾಗುವುದಿಲ್ಲವಾ?

(ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರು ಹಾಗೂ ದಿಗಂಬರ್ ಯಶವಂತರಾವ್ ಪಾಟೀಲ್ (ಸದನದ ಬಾವಿಗೆ ಬಂದರು)

ಈ ಹಂತದಲ್ಲಿ ಮಾನ್ಯ ವಾಟಾಳ್ ನಾಗರಾಜ್‌ರವರು ಮಾನ್ಯ ಸಭಾಧ್ಯಕ್ಷರ ಪೀಠದ ಬಳಿ ಬಂದರು.

ಉಪಾಧ್ಯಕ್ಷರು : ಅವರು ನಿಂತುಕೊಳ್ಳಲಿ, ತಾವು ನಿಮ್ಮ ಸೀಟಿಗೆ ಹೋಗಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರೇ, ಇಲ್ಲಿ ಮರಾಠಿ ಭಾಷೆ ಯಾರಿಗೂ ಬರುವುದಿಲ್ಲ. ನೀವು ಮಾತನಾಡುವುದಾದರೆ ಇಂಗ್ಲೀಷ್‌ನಲ್ಲಿ ಮಾತನಾಡಿ, ಇಲ್ಲ ಎಂದರೆ ಕನ್ನಡ ಭಾಷೆಯಲ್ಲಿ ಮಾತನಾಡಿ.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ವಾಟಾಳ್ ನಾಗರಾಜ್‌ರವರೇ, ದಯವಿಟ್ಟು ನೀವು ನಿಮ್ಮ ಸೀಟಿಗೆ ಹೋಗಿ.

(ಸದನದ ಬಾವಿಯಲ್ಲಿ ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರು ಮರಾಠಿ ಭಾಷೆಯಲ್ಲಿ ಮಾತನಾಡುತ್ತಿದ್ದರು)

ಉಪಾಧ್ಯಕ್ಷರು : ಅವರು ಸದನದ ಬಾವಿಯಲ್ಲಿ ಕುಳಿತುಕೊಳ್ಳಲಿ, ಬಿಡಿ, ಸದನದ ಕಾರ್ಯಕಲಾಪಗಳು ಮುಂದುವರೆಯಲಿ, ಅವರು ಧರಣಿ ಮಾಡಿದರೆ ನಮಗೆ ಏನಂತೆ, ಕುಳಿತುಕೊಳ್ಳಲಿ.

(ಗೊಂದಲ)

ಶ್ರೀ ನೆ.ಲ. ನರೇಂದ್ರಬಾಬು: ಕನ್ನಡ ಬರದೇ ಇದ್ದರೆ ಕಲಿಸುತ್ತೇವೆ ಬನ್ನಿ.

ಡಾ. ಕೆ. ಅನ್ನದಾನಿ : ಮಾನ್ಯ ವಾಟಾಳ್ ನಾಗರಾಜ್‌ರವರೇ, 1ನೇ ತರಗತಿಯಿಂದ ಇಂಗ್ಲೀಷ್ ಭಾಷೆಯನ್ನು ತರುವಂಥಾದ್ದು ಇದಕ್ಕೋಸ್ಕರನೇ, ಇವತ್ತು ಅವರು ಇಂಗ್ಲೀಷ್‌ನಲ್ಲಿ ಮಾತನಾಡಬಾರದು, ಕನ್ನಡದಲ್ಲಿ ಮಾತನಾಡಬೇಕು.

(ಗೊಂದಲ)

ಉಪಾಧ್ಯಕ್ಷರು : ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರೇ, ತಾವು ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಿ.

ಶ್ರೀ ಎಂ.ಪಿ. ಪ್ರಕಾಶ್ (ಕಂದಾಯ ಸಚಿವರು): ಉಪಾಧ್ಯಕ್ಷರೇ, ಮಾನ್ಯ ಸದಸ್ಯರಿಗೆ ಸಂವಿಧಾನದಲ್ಲಿ ಹೆಸರಿಸಲ್ಪಟ್ಟಿರುವಂತಹ ಶೆಡ್ಯೂಲಿನ ಭಾಷೆಗಳನ್ನು ಮಾತನಾಡುವಂತಹ ಅಧಿಕಾರವಿದೆ. ಆದರೆ ಮಾನ್ಯ ವಾಟಾಳ್ ನಾಗರಾಜ್ ರವರು, ಇದು ಕನ್ನಡದ ಶಾಸನಸಭೆಯಾಗಿರುವುದರಿಂದ, ನಮ್ಮ ನಡುವಿನ

ಭಿನ್ನಾಭಿಪ್ರಾಯವಿರುವುದರಿಂದ ನಿಮಗೆ ಒಳ್ಳೆಯ ಕನ್ನಡ ಭಾಷೆ ಬರುತ್ತದೆ, ಮಾತನಾಡಿ ಎಂದು ಹೇಳಿದ್ದಾರೆ. ಅದು ಆಗದಿದ್ದರೆ ತಾವು ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಿ ಎಂದು ಎಲ್ಲರೂ ಹೇಳಿದ್ದಾರೆ. ನಾನು ಮಾನ್ಯ ಸದಸ್ಯರಲ್ಲಿ ವಿನಂತಿ ಮಾಡಿಕೊಳ್ಳುತ್ತಿದ್ದೇನೆ. ನೀವು ಯಾವ ಭಾಷೆಯನ್ನು ಬೇಕಾದರೂ ಬಳಸಬಹುದು, ನಿಮಗೆ ಅಧಿಕಾರವಿದೆ, ಆದರೆ ನಾವು ಭಾಷೆಯನ್ನು ಈ ಸದನದಲ್ಲಿ ಏಕೆ ಮಾತನಾಡುತ್ತೇವೆ. ನಾವು ಮಾತನಾಡತಕ್ಕಂಥ ಭಾಷೆ ಬೇರೆಯವರಿಗೆ ಅರ್ಥವಾಗಬೇಕು, ಮತ್ತೆ ಸರ್ಕಾರದಿಂದ ಪರಿಹಾರ ಸಿಗಬೇಕೆಂಬ ಕಾರಣಕ್ಕೆ ಭಾಷೆಯನ್ನು ಬಳಸುತ್ತೇವೆ. ಈ ವಿಚಾರವೂ ಸಾರ್ವಜನಿಕರಿಗೂ ಗೊತ್ತಾಗಬೇಕೆಂಬ ದೃಷ್ಟಿಯಿಂದ ಪತ್ರಿಕಾ ಕರ್ತರು ಭಾಷೆಯನ್ನು ಬಳಸುತ್ತಾರೆ. ಇಲ್ಲಿ ನಿಮ್ಮ ಹಕ್ಕಿಗೆ ಚ್ಯುತಿ ಇಲ್ಲ. ಆದರೆ ಅವರೂ ಕೂಡ ನಿಮಗೆ ಕನ್ನಡ ಚೆನ್ನಾಗಿ ಬರುತ್ತದೆಂದು, ಮಾತನಾಡಿ ಎಂದು ಹೇಳಿದ್ದಾರೆ. ನಿಮಗೆ ಕನ್ನಡದಲ್ಲಿ ಮಾತನಾಡಲು ಬರದಿದ್ದರೆ, ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಿ. ದಯವಿಟ್ಟು ತಾವು ಇಂಗ್ಲೀಷ್‌ನಲ್ಲಿ ಮಾತನಾಡಿ, ಅದು ಎಲ್ಲರಿಗೂ ಅರ್ಥವಾಗುತ್ತದೆ. ತಾವು ಈ ರೀತಿ ಸದನದ ಬಾವಿಯಲ್ಲಿ ಬೀಳಬಾರದು, ತಾವು ಹಿರಿಯ ಸದಸ್ಯರಾಗಿದ್ದೀರಿ. Please, I request you. It is alright, kindly speak, you have a constitutional right to speak. You speak in English.

(ಮಾನ್ಯ ಸದಸ್ಯರು ಸದನದ ಬಾವಿಯಲ್ಲಿ ನಿಂತು ಇಂಗ್ಲೀಷ್ ಭಾಷೆಯಲ್ಲಿ ಮಾತನಾಡುತ್ತಿದ್ದರು)

ಶ್ರೀ ನೆ .ಲ. ನರೇಂದ್ರ ಬಾಬು: ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸದಸ್ಯರಿಗೆ ಕನ್ನಡ ಭಾಷೆ ಬರುವುದಾದರೆ ಕನ್ನಡದಲ್ಲೆ ಮಾತನಾಡಲಿ. ಏಕೆ ಕನ್ನಡದಲ್ಲಿ ಮಾತನಾಡುವುದಕ್ಕೆ ಆಗುವುದಿಲ್ಲವೇ?

ಡಾ. ಕೆ. ಅನ್ನದಾನಿ: ಮಾನ್ಯ ಉಪಾಧ್ಯಕ್ಷರೆ, ಕರ್ನಾಟಕದ ಗಡಿಭಾಗದಲ್ಲಿರುವಂತಹ ಪ್ರತಿಯೊಬ್ಬ ಮನುಷ್ಯನು ಕನ್ನಡ ಬಂದರೂ ಕೂಡ ಅವರು ಕನ್ನಡ ಭಾಷೆಯನ್ನು ಮಾತನಾಡುವುದಿಲ್ಲ. ಇದು ನಿಜವಾಗಿಯೂ ಕನ್ನಡ ನಾಡಿಗೆ ಅವಮಾನವಾಗುವಂಥಾದ್ದು. ಮಾನ್ಯ ಸದಸ್ಯರು ಬೇಕೆಂದು ಹಾಗೆ ಮಾಡುತ್ತಿದ್ದಾರೆ. ಬೆಳಗಾಂ ಮಹಾರಾಷ್ಟ್ರದ ಗಡಿಯಲ್ಲಿರುವಂತಹ ಅಥವಾ ಆಂಧ್ರ ಪ್ರದೇಶದ ಗಡಿಯಲ್ಲಿರತಕ್ಕಂಥ ಅಥವಾ ತಮಿಳುನಾಡಿನ

ಗಡಿಯಲ್ಲಿರತಕ್ಕಂಥ, ಎಲ್ಲಾ ಕನ್ನಡಿಗರು ಸಹಿತ ಕನ್ನಡ ಭಾಷೆಯನ್ನು ಮಾತನಾಡುತ್ತಾರೆ. ಇವರು ಬೇಕು ಬೇಕೆಂದು ಕನ್ನಡದಲ್ಲಿ ಮಾತನಾಡುವುದಕ್ಕೆ ಇಷ್ಟಪಡುತ್ತಿಲ್ಲ. ದಯಮಾಡಿ ಕನ್ನಡದಲ್ಲಿ ಮಾತನಾಡಬೇಕು. ಅದು ಎಲ್ಲರಿಗೂ ಅರ್ಥವಾಗಬೇಕು, ಇಲ್ಲವೆಂದರೆ ಅವರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಡಬಾರದೆಂದು ನಾನು ಮನವಿಯನ್ನು ಮಾಡುತ್ತೇನೆ.

ಮಾನ್ಯ ಸದಸ್ಯರು: ಬೆಂಗಳೂರಿನಲ್ಲಿ ತಮಿಳು ಭಾಷೆಯಲ್ಲಿ ಮಾತನಾಡುತ್ತಾರೆ ಅವರು ಇಂಗ್ಲೀಷ್ ಭಾಷೆಯಲ್ಲಿ ಮಾತನಾಡುವಾಗ ಅವರಿಗೆ ಏಕೆ ಡಿಸ್ಟ್ರಬೆನ್ಸ್ ಮಾಡಬೇಕು.

ಶ್ರೀ ಪ್ರಕಾಶ್ ಖಂಡ್ರೆ : ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸದಸ್ಯರು ಇಂಗ್ಲೀಷ್ ಭಾಷೆಯಲ್ಲಿ ಮಾತನಾಡುತ್ತಿದ್ದರು. ಅವರಿಗೆ ಅನಾವಶ್ಯಕವಾಗಿ ಏಕೆ ಡಿಸ್‌ಟರ್ಬ್ ಏಕೆ ಮಾಡುತ್ತಾರೆ. ಅವರು ತಮ್ಮ ಭಾಷಣವನ್ನು ಇಂಗ್ಲೀಷ್ ಭಾಷೆಯಲ್ಲೇ ಪ್ರಾರಂಭಮಾಡಲಿ.

(ಗೊಂದಲ)

ಡಾ: ಕೆ. ಅನ್ನದಾನಿ: ಮಾನ್ಯ ಉಪಾಧ್ಯಕ್ಷರೆ, ಅವರು ಈ ಸದನದಲ್ಲಿ ಕನ್ನಡ ಭಾಷೆ ಬರುವುದಿಲ್ಲವೆಂದು ಪ್ರಮಾಣ ಮಾಡಲಿ, ಅನಂತರ ಇಂಗ್ಲೀಷ್ ಭಾಷೆಯಲ್ಲಿ ಭಾಷಣವನ್ನು ಮಾಡಲಿ. ಈ ಸದನ ದೇವಸ್ಥಾನವಿದ್ದಹಾಗೆ, ಈ ಸದನದಲ್ಲಿ ಕನ್ನಡ ಭಾಷೆ ಬರುವುದಿಲ್ಲವೆಂದು ಪ್ರಮಾಣ ಮಾಡಲಿ. ಆಮೇಲೆ ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಲಿ, ಅಲ್ಲಿಯವರೆಗೂ ತಾವು ಯಾವುದೇ ಕಾರಣಕ್ಕೂ ಅವರಿಗೆ ಮಾತನಾಡಲು ಅವಕಾಶವನ್ನು ಮಾಡಿಕೊಡಬೇಡಿ.

(ಗೊಂದಲ)

ಉಪಾಧ್ಯಕ್ಷರು: ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರೆ, ತಾವು ತಮ್ಮ ಸೀಟಿಗೆ ಹೋಗಿ ಇಂಗ್ಲೀಷ್ ಭಾಷೆಯಲ್ಲಿ ಮಾತನಾಡಿ.

ಶ್ರೀ ಬಸವರಾಜ ರಾಯರೆಡ್ಡಿ: ಮಾನ್ಯ ಉಪಾಧ್ಯಕ್ಷರೆ, ತಾವು ಈಗ ಸದನವನ್ನು ಮೂಂದೂಡಿದರೆ ಒಳ್ಳೆಯದು ಏಕೆಂದರೆ ಈಗ ಮಾನ್ಯ ಸಿಂಧ್ಯರವರು ಊಟದ ವ್ಯವಸ್ಥೆ ಮಾಡಿದ್ದಾರೆ.

ಉಪಾಧ್ಯಕ್ಷರು: ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರೆ, ಈಗ ಮಾನ್ಯ ಹಿರಿಯ ಸಚಿವರಾದ ಎಂ.ಪಿ. ಪ್ರಕಾಶ್‌ರವರು ಹೇಳಿದರು. ಅದು ನಿಮಗೆ ಅರ್ಥವಾಯಿತಾ?

ಶ್ರೀ ಬಸವರಾಜ್ ರಾಯರೆಡ್ಡಿ : ಮಾನ್ಯ ಉಪಾಧ್ಯಕ್ಷರೇ, ತಾವು ದಯಮಾಡಿ ಸದನ ಸಭೆಯನ್ನು ಸ್ವಲ್ಪ ಸಮಯ ಮುಂದಕ್ಕೆ ಹಾಕಿ, ಏಕೆಂದರೆ ಅವರಿಗೆ ಸ್ವಲ್ಪ ಹಸಿವೆ ಆಗಿದೆ. ಅವರಿಗೆ ಸಹಜವಾಗಿ ಹಸಿವೆಯಾಗಿರುವುದರಿಂದ ಈ ರೀತಿ ಆಗುತ್ತಿದೆ.

ಉಪಾಧ್ಯಕ್ಷರು: ಮಾನ್ಯ ಬಸವರಾಜ್ ರಾಯರೆಡ್ಡಿಯವರೆ, ನಾವು ನಿಮ್ಮ ಮಾತಿಗೂ ಬೆಲೆ ಕೊಡುತ್ತೇವೆ. ತಾವು ದಯಮಾಡಿ ಕುಳಿತುಕೊಳ್ಳಿ. ಈಗ ಒಂದು ಪ್ರಕಟಣೆ ಇದೆ.

(ಮಾನ್ಯ ಮನೋಹರ್ ಕಲ್ಲಪ್ಪ ಕಿನೆಕರ್‌ರವರು ತಮ್ಮ ಸೀಟಿಗೆ ತೆರಳಿದರು)

Sri Manohar Kallappa Kinekar: Sir, I am a member of this House. I cannot talk in Kannada. But I give due respect to Kannada. But when we are in Karnataka, we are linguistic minority people. Linguistic minority people's right should be protected by the Government. Your Karnataka Government itself has made an Act-Linguistic Minority Act-1983.

ಡಾ: ಕೆ. ಅನ್ನದಾನಿ: ಮಾನ್ಯ ಉಪಾಧ್ಯಕ್ಷರೆ, ನನಗೆ ಸದನದಲ್ಲಿ ಏನೂ ಅರ್ಥವಾಗುತ್ತಿಲ್ಲ. ದಯಮಾಡಿ ಎಲ್ಲಾ ಸದಸ್ಯರಿಗೂ ಅರ್ಥವಾಗುವ ರೀತಿಯಲ್ಲಿ ಭಾಷಣವನ್ನು ಮಾಡಬೇಕು. ಅವರು ಕನ್ನಡದಲ್ಲಿ ಮಾತನಾಡಬೇಕು, ನಮಗೆ ಅರ್ಥವಾಗುತ್ತಿಲ್ಲ.

4. ಪ್ರಕಟಣೆ :

ವಿಷಯ: ಮಾನ್ಯ ಸಣ್ಣ ಕೈಗಾರಿಕೆ ಸಚಿವರು ಮಧ್ಯಾಹ್ನ 1.30 ಗಂಟೆಗೆ ಬ್ಯಾಂಕ್ವೆಟ್ ಹಾಲ್‌ನಲ್ಲಿ ಭೋಜನ ಕೂಟ ಏರ್ಪಡಿಸಿದ್ದು ಸದಸ್ಯರುಗಳನ್ನು ಆಹ್ವಾನಿಸಿರುವುದರ ಬಗ್ಗೆ.

ಉಪಾಧ್ಯಕ್ಷರು: ಈಗ ಒಂದು ಪ್ರಕಟಣೆ ಇದೆ, ಮಾನ್ಯ ಸಿಂಧ್ಯಾರವರು ಬ್ಯಾಂಕ್ವೆಟ್ ಹಾಲ್‌ನಲ್ಲಿ ಈಗ 1.30 ಗಂಟೆಗೆ ಊಟಕ್ಕೆ ಕರೆದಿದ್ದಾರೆ. ಮಾನ್ಯ ಸದಸ್ಯರೆಲ್ಲರೂ ಊಟಕ್ಕೆ ಬರಬೇಕೆಂದು ಅವರು ಕೇಳಿಕೊಂಡಿದ್ದಾರೆ.

ಶ್ರೀ ವಾಟಾಳ್ ನಾಗರಾಜ್: ಇದು ಬಹಳ ಅತಿ ಆಯಿತು.

(ಈ ಹಂತದಲ್ಲಿ ಮನೋಹರ್ ಕಲ್ಲಪ್ಪ ಕಿನೇಕರ್ ಹಾಗೂ (ದಿಗಂಬರ್ ಯಶವಂತರಾವ್ ಪಾಟೀಲ್ ಸದನದ ಬಾವಿಗೆ ಬಂದರು)